**ದಿನಾಂಕ: 10.02.2026ರಂದು ನಡೆಯಲಿರುವ ಪ್ರಶಿಕ್ಷಣ ಪರಿಷತ್‌ನ 45ನೇ ಸಭೆಯ ನಡಾವಳಿಗಳು.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 45ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 10–02–2026ರ** ಮಂಗಳವಾರ ಬೆಳಿಗ್ಗೆ: 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಸತ್ಯವತಿ ಎಮ್., ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
3. ಪ್ರೊ. ವಿ. ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕ.ಸಂ.ವಿ. – ಸದಸ್ಯರು
4. ಪ್ರೊ. ಸಿ. ಪಾಲಯ್ಯ, ಡೀನ್, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯ, ಕ.ಸಂ.ವಿ. – ಸದಸ್ಯರು
5. ಡಾ. ವಿನಯ್ ಪಿ., ಡೀನ್, ವೇದಾಂತ ನಿಕಾಯ, ಕ.ಸಂ.ವಿ. – ಸದಸ್ಯರು
6. ವಿದ್ವಾನ್ ಸತ್ಯನಾರಾಯಣ ವೆಂಕಟರಾವ್, ಪ್ರಾಂಶುಪಾಲರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ – ಸದಸ್ಯರು
7. ಡಾ. ಕೃಷ್ಣ ಜೋಶಿ, ಪ್ರಾಂಶುಪಾಲರು, ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು, ಸ್ವರ್ಣವಲ್ಲಿ, ಶಿರಸಿ ತಾ. – ಸದಸ್ಯರು
8. **ಡಾ. ಮಹಾಬಲೇಶ್ವರ ಎಸ್. ಭಟ್ಟ**, ಪ್ರಾಂಶುಪಾಲರು, ವೇದವಿಜ್ಞಾನಶೋಧಸಂಸ್ಥಾನ ಸಂಸ್ಕೃತ ಕಾಲೇಜು, ಚನ್ನೇನಹಳ್ಳಿ, – ಸದಸ್ಯರು
9. ಡಾ. ರಾಮಕೃಷ್ಣ ಭಟ್ ಕೆ., ಕುಲಸಚಿವರು (ಮೌಲ್ಯಮಾಪನ)(ಪ್ರ), ಕ.ಸಂ.ವಿ. – ಆಹ್ವಾನಿತರು
10. ಪ್ರೊ. ವಿ. ಗಿರೀಶ್ ಚಂದ್ರ, ಕುಲಸಚಿವರು(ಪ್ರ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯ ಕಾರ್ಯದರ್ಶಿಗಳು

**ಸಭೆಯಲ್ಲಿ ಹಾಜರಿಲ್ಲದವರು:**

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
4. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು.
5. ಪ್ರೊ. ಶಿವಾನಿ ವಿ., ಡೀನ್, ಶಾಸ್ತ್ರ ನಿಕಾಯ, ಕ.ಸಂ.ವಿ.
6. ಡಾ. ಶರತ್ ಚಂದ್ರ ಸ್ವಾಮೀಜಿ, ಡೀನ್, ವೈದಿಕ ಅಧ್ಯಯನ ನಿಕಾಯ, ಕ.ಸಂ.ವಿ.
7. ಡಾ. ಪಿ. ಸತ್ಯನಾರಾಯಣ, ಪ್ರಾಂಶುಪಾಲರು(ಪ್ರ), ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು.

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ. ಸಂಖ್ಯೆ | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **ಯೋಗದಲ್ಲಿ ಸಾಧನೆ ಮಾಡಿದವರನ್ನು 'ಗೌರವ ಡಾಕ್ಟರೇಟ್'ಗೆ ಪರಿಗಣಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಸಂಸ್ಕೃತ ಮತ್ತು ವೇದ ವಿಭಾಗದಲ್ಲಿ ಸಾಧನೆ ಮಾಡಿದ ವಿದ್ವಾಂಸರನ್ನು ಗುರುತಿಸಿ 'ಗೌರವ ಡಾಕ್ಟರೇಟ್' ನೀಡುವಂತೆಯೇ ಯೋಗ ವಿಭಾಗದಲ್ಲಿ ಸಾಧನೆ ಮಾಡಿದ ಅರ್ಹರಾದವರನ್ನು ಗುರುತಿಸಿ 'ಗೌರವ ಡಾಕ್ಟರೇಟ್' ನೀಡಲು ಸಭೆಯ ಅನುಮೋದನೆಗೆ ಮಂಡಿಸಿದೆ. |

| | |
|---|---|
| ನಿರ್ಣಯ | ಶಾಸ್ತ್ರ ಮತ್ತು ಯೋಗ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ನಿಯಮಾನುಸಾರ ಪ್ರತಿ 03 ವರ್ಷದ ಅವಧಿಗೆ ಒಬ್ಬರಿಗೆ 'ಗೌರವ ಡಾಕ್ಟರೇಟ್' ನೀಡಲು ಸಭೆಯು ಅನುಮೋದಿಸಿತು. |
| ವಿಷಯ 02 | ಕಾಲೇಜುಗಳಿಗೆ ಮಾನ್ಯತೆಯನ್ನು ನವೀಕರಿಸುವ ಬಗ್ಗೆ. |
| ಟಿಪ್ಪಣಿ | ಸರ್ಕಾರದ ಆದೇಶದಂತೆ ಎಲ್ಲಾ ಸಂಯೋಜನೆಯ ಪ್ರಸ್ತಾವನೆಗಳನ್ನು UUCMS ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿಯೇ ಸರ್ಕಾರಕ್ಕೆ ಸಲ್ಲಿಸಬೇಕು. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು 2026-27ನೇ ಸಾಲಿಗೆ ಸಂಸ್ಕೃತ ಕಾಲೇಜುಗಳ ಮಾನ್ಯತೆ ನವೀಕರಣಕ್ಕಾಗಿ ಹೊಸ ಕೋರ್ಸಿಗೆ ಅನುಮತಿಗಾಗಿ ಸ್ಥಳೀಯ ಪರಿಶೀಲನಾ ಸಮಿತಿಯನ್ನು ರಚಿಸಿತ್ತು. ಸ್ಥಳೀಯ ಪರಿಶೀಲನಾ ಸಮಿತಿಯು ಆಯಾ ಕಾಲೇಜುಗಳಿಗೆ ಭೇಟಿ ನೀಡಿ UUCMS ಪೋರ್ಟಲ್ ನಲ್ಲಿ ವರದಿ ಸಲ್ಲಿಸಿರುತ್ತಾರೆ. ಮಾನ್ಯತೆ ನವೀಕರಿಸುವ ಸಂಬಂಧ ಅನುಮೋದನೆಗಾಗಿ ಪ್ರಶಾಸನ ಸಮಿತಿಗೆ ಮಂಡಿಸಿದೆ. |

| ಕ್ರ.ಸಂ. | ಕಾಲೇಜಿನ ಹೆಸರು |
|---|---|
| 1. | ಶ್ರೀ ಮನ್ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರೋಡ್, ಮೈಸೂರು-24 |
| 2. | ಶ್ರೀ ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ,571431 |
| 3. | ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು ಮಂಡ್ಯ 571811 |
| 4. | ಶ್ರೀ ಮಲೆಮಹದೇಶ್ವರ ಸಂಸ್ಕೃತ ಕಾಲೇಜು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ |
| 5. | ಶ್ರೀ ಶಂಕರ ವಿಲಾಸ ಸಂಸ್ಕೃತ ಕಾಲೇಜು, ಅರಮನೆ ಜಪದಕಟ್ಟೆಮಠ, ಶಂಕರಮಠದ ರಸ್ತೆ, 2ನೇ ಅಡ್ಡರಸ್ತೆ, ಖಿಲ್ಲೆಮೊಹಲ್ಲಾ, ಮೈಸೂರು-57000 |
| 6. | ಜೆ. ಎಸ್. ಎಸ್. ಸಂಸ್ಕೃತ ಕಾಲೇಜು, ಸುತ್ತೂರು -571129, ನಂಜನಗೂಡು ತಾ॥, ಮೈಸೂರು ಜಿ॥ |
| 7. | ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಕಾಲೇಜು, ಉಡುಪಿ. |
| 8. | ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು. ಉಮ್ಮಚಗಿ, ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ. |
| 9. | ಶ್ರೀ ರಾಜರಾಜೇಶ್ವರೀ ಸಂಸ್ಕೃತ ಕಾಲೇಜು, ಸೋಂದಾ ಸ್ವರ್ಣವಲ್ಲೀ ಮಠ, ಮಠದೇವಳ ಅಂಚೆ -581336 ಶಿರಸಿ ತಾಲ್ಲೂಕು, ಉ.ಕ. ಜಿಲ್ಲೆ |
| 10. | ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ, ಉ.ಕ. ಜಿಲ್ಲೆ |
| 11. | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು. |
| 12. | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ, ಮುಖ್ಯರಸ್ತೆ, ಬೆಂಗಳೂರು-560 028 |
| 13. | ಶ್ರೀ ನಿರ್ವಾಣಸ್ವಾಮಿ ಸಂಸ್ಕೃತ ಕಾಲೇಜು, ಶ್ರೀದೇಗುಲಮಠ, ಕನಕಪುರ-562117 ರಾಮನಗರ ಜಿಲ್ಲೆ. |
| 14. | ಶ್ರೀ ರುದ್ರೇಶ್ವರ ಸಂಸ್ಕೃತ ಕಾಲೇಜು, ರಾಜಘಟ್ಟ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ - 561203 |
| 15. | ಶ್ರೀ ಬಸವೇಶ್ವರ ಸಂಸ್ಕೃತ ಕಾಲೇಜು, ಪವಾಡ ಶ್ರೀ ಬಸವಣ್ಣ ದೇವರಮಠ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ - |
| 16. | ಶ್ರೀ ವೇದವಿಜ್ಞಾನ ಶೋಧ ಸಂಸ್ಥಾನ (ರಿ) ಸಂಸ್ಕೃತ ಕಾಲೇಜು ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಂಗಳೂರು-562130 |
| 17. | ಪೂರ್ಣಪ್ರಜ್ಞ ವಿದ್ಯಾಪೀಠ ವೇದಾಂತ ಗುರುಕುಲಂ ಸಂಸ್ಕೃತ ಕಾಲೇಜು, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು-560 028 |
| 18. | ವೇದವಿಜ್ಞಾನ ಮಹಾವಿದ್ಯಾಪೀಠ ವೇದ ಆಗಮ ಸಂಸ್ಕೃತ ಮಹಾ ಪಾಠಶಾಲೆ, ವೇದ ವಿಭಾಗ, ಕನಕಪುರ ರಸ್ತೆ, ಉದಯಪುರ, ಬೆಂಗಳೂರು,560082 |
| 19. | ಶ್ರೀ ಸಿದ್ಧಲಿಂಗೇಶ್ವರ ವೇದ ಸಂಸ್ಕೃತ ಕಾಲೇಜು, ಸಿದ್ಧಗಂಗಾ ಮಠ, ತುಮಕೂರು -572 104 |

| | | |
|---|---|---|
| | 20. | ಶ್ರೀ ಫಿರಂಗಿಸ್ವಾಮಿ ಸಂಸ್ಕೃತ ಕಾಲೇಜು, ಅಂಕನಹಳ್ಳಿ ಮಠ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ. |
| | 21. | ಶ್ರೀ ಜಗದ್ಗುರು ಗುರುಬಸವೇಶ್ವರ ಸಂಸ್ಕೃತ ಕಾಲೇಜು, ಶ್ರೀ ಬೆಕ್ಕಿನಕಲ್ಮಠ, ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ವೃತ್ತ, ಶಿವಮೊಗ್ಗ–577202 |
| | 22. | ಶ್ರೀ ಪೂರ್ಣ ಪ್ರಜ್ಞಾ ಸಂಸ್ಕೃತ ಕಾಲೇಜು. ರಾಜೇಂದ್ರ ನಗರ, ಚಿತ್ರದುರ್ಗ |
| | 23. | ಶ್ರೀ ಚನ್ನಮಲ್ಲಿಕಾರ್ಜುನಸ್ವಾಮಿ ಸಂಸ್ಕೃತ ಕಾಲೇಜು, ಹಿರೇಕಲ್ಮಠ, ಹೊನ್ನಾಳಿ, ದಾವಣಗೆರೆ ಜಿಲ್ಲೆ – 577217 |
| | 24. | ಶ್ರೀ ಲಕ್ಷ್ಮೀನರಸಿಂಹ ಸಂಸ್ಕೃತ ಕಾಲೇಜು, ಜಮಖಂಡಿ – 587 301 ಬಾಗಲಕೋಟೆ ಜಿಲ್ಲೆ |
| | 25. | ಶ್ರೀ ಗಜಾನನ ಸಂಸ್ಕೃತ ಕಾಲೇಜು, ಸೂಡಿ, ರೋಣ ತಾಲ್ಲೂಕು, ಗದಗ ಜಿಲ್ಲೆ |
| | 26. | ಸಿ. ಎಲ್. ವೈ. ಸಂಸ್ಕೃತ ಕಾಲೇಜು, ಕುಮಾರೇಶ್ವರ ನಗರ, ಬೆಳಗಾವಿ ರಸ್ತೆ, ಧಾರವಾಡ – 580 008. |
| | 27. | ಶ್ರೀ ಗುರುಸಾರ್ವಭೌಮ ವೇದ ಸಂಸ್ಕೃತ ಕಾಲೇಜು. ಎನ್. ಎಸ್.ಆರ್. ಎಸ್. ಮಠ, ಜವಾಹರ ನಗರ, ರಾಯಚೂರು. |
| | 28. | ಶ್ರೀಮದ್ ಆದಿಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮಿಗಳ ಸಂಸ್ಕೃತ ಮತ್ತು ವೇದ ಮಹಾವಿದ್ಯಾಲಯ, ಮಧುರಖಂಡಿ, ಕಮರೀಮಠ, ನಂದೀಶ್ವರ, ಅಥಣಿ, ಬೆಳಗಾವಿ ಜಿಲ್ಲೆ, |
| | 29. | Valmiki College of Vedic Wisdom, Ragihalli, Anekal, Banglore. |
| ನಿರ್ಣಯ | | **2026–27ನೇ ಸಾಲಿನ 29 ಕಾಲೇಜುಗಳ ಮಾನ್ಯತೆ ನವೀಕರಣಕ್ಕೆ ಸಭೆಯು ಅನುಮೋದಿಸಿತು.** |
| **ವಿಷಯ 03** | | **Tadvidya Sambhasha Parishat Trust, Hubli, Karnataka–580032 – ಈ ಸಂಸ್ಥೆಗೆ ವಿಶ್ವವಿದ್ಯಾಲಯದ Logo ಮತ್ತು ಹೆಸರನ್ನು ಬಳಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.** |
| ಟಿಪ್ಪಣಿ | | Tadvidya Sambhasha Parishat Trust, Hubli, Karnataka ಈ ಸಂಸ್ಥೆಯು ದಿನಾಂಕ: 30.04.2026 ರಿಂದ 03.05.2026 ರವರೆಗೆ ಕಾರ್ಯಕ್ರಮವನ್ನು ನಡೆಸುತ್ತಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Logo ಮತ್ತು ಹೆಸರನ್ನು ಬಳಸಿಕೊಳ್ಳಲು ಅನುಮತಿ ನೀಡಲು ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | | **ಈ ಕಾರ್ಯಕ್ರಮಕ್ಕೆ ಮತ್ತು ಈ ಕಾರ್ಯಕ್ರಮದ ಪ್ರಸರಣಗಳಿಗೆ ಸಂಬಂಧಿಸಿದಂತೆ ಮಾತ್ರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಲೋಗೋ ಮತ್ತು ಹೆಸರನ್ನು ಬಳಸಿಕೊಳ್ಳಲು ಹಾಗೂ ISBN ನೀಡಲು ಸಭೆಯು ಅನುಮತಿಸಿತು.** |
| **ವಿಷಯ 04** | | **16.01.2025 ರಿಂದ 3.01.2026 ರ ವರೆಗೆ ಅನುದಾನ ರಹಿತವಾಗಿ 19 ಸಂಸ್ಕೃತ & ವೇದ ಪಾಠಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದ್ದು, ಈ ಪಾಠಶಾಲೆಗಳಿಗೆ ಘಟನೋತ್ತರವಾಗಿ ಅನುಮೋದನೆ ಪಡೆಯುವ ಕುರಿತು.** |
| ಟಿಪ್ಪಣಿ | | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಹೊಸದಾಗಿ ದಿನಾಂಕ: 16.01.2025 ರಿಂದ 3.01.2026ರ ವರೆಗೆ ಅನುದಾನ ರಹಿತವಾಗಿ 19 ಸಂಸ್ಕೃತ & ವೇದ ಪಾಠಶಾಲೆಗಳನ್ನು ಹೊಸದಾಗಿ ಪ್ರಾರಂಭಿಸಲಾಗಿದ್ದು, ಘಟನೋತ್ತರವಾಗಿ ಸಭೆಯ ಅನುಮೋದನೆಗೆ ಮಂಡಿಸಿದೆ. ಅನುದಾನ ರಹಿತವಾಗಿ ಹೊಸದಾಗಿ ಪ್ರಾರಂಭಿಸಲು ಅನುಮತಿ ನೀಡಿರುವ ಪಾಠಶಾಲೆಗಳ ವಿವರ** ಈ ಕೆಳಕಂಡಂತಿದೆ.<br>1. ಜಗದ್ಗುರು ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಸಂಸ್ಕೃತ ವೇದ ಆಗಮ ಪಾಠಶಾಲೆ, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು–560060<br>2. ಶ್ರೀ ಅಪರ್ಣಾಂಬ ಸಂಸ್ಕೃತ ಮತ್ತು ವೇದ ಪಾಠಶಾಲೆ, ಸುಕ್ಷೇತ್ರ ಮುನೇಶ್ವರ ನಗರ, ಚಿಮ್ಮನಹಳ್ಳಿ, ದೊಡ್ಡಗೋರಘಟ್ಟ ಅಂಚೆ, ತುರುವೇಕೆರೆ ತಾ, ತುಮಕೂರು ಜಿಲ್ಲೆ– 572220<br>3. ಶ್ರೀ ಗುರು ಸಿದ್ಧಲಿಂಗಸ್ವಾಮಿ ಒಡೆಯರ "ಗುರುಕುಲ" ಸಂಸ್ಕೃತ ಪಾಠಶಾಲೆ, ಬೋಳನಹಳ್ಳಿ, ಬಿಳಿಕೆರೆ ಹೋಬಳಿ, ಹುಣಸೂರು ತಾ, ಮೈಸೂರು ಜಿಲ್ಲೆ–571103 |

| | |
|---|---|
| | 4. ಶ್ರೀ ಸೋಮಲಿಂಗೇಶ್ವರ ಸಂಸ್ಕೃತ ಪಾಠಶಾಲೆ, ಕೊತಬಾಳ, ರೋಣ ತಾ, ಗದಗ ಜಿಲ್ಲೆ–582209<br>5. ಶಂಕರಯ್ಯ ವೇದ–ಸಂಸ್ಕೃತ ಪಾಠಶಾಲೆ, ಸಂಜಯಗಾಂಧಿ ನಗರ, ಕಲಬುರಗಿ–585101<br>6. ಶ್ರೀ ಜಗದ್ಗುರು ರೇಣುಕಾಚಾರ್ಯ ವೇದ–ಸಂಸ್ಕೃತ ಪಾಠಶಾಲೆ, ಮುದ್ದಡಗಾ ಕಮಲಾಪುರ ತಾ, ಕಲಬುರಗಿ ಜಿಲ್ಲೆ–585316<br>7. ಶ್ರೀ ಹಾನಗಲ್ಲ ಗುರು ಕುಮಾರೇಶ್ವರ ವೇದ–ಸಂಸ್ಕೃತ ಪಾಠಶಾಲೆ, ಅರಹಳ್ಳಿ, ಗಂಗಾವತಿ ತಾ, ಕೊಪ್ಪಳ ಜಿಲ್ಲೆ–582227<br>8. ಶ್ರೀ ಬಿ.ಎಂ.ಎಸ್ ಸಂಸ್ಕೃತ ವೇದ ಆಗಮ ಪಾಠಶಾಲೆ, ಶ್ರೀ ಕ್ಷೇತ್ರ ಭಕ್ತಮುನೇಶ್ವರ, ಮಾದಿಗೊಂಡನಹಳ್ಳಿ ಪೋಸ್ಟ್, ಕುದೂರು ಹೋಬಳಿ, ಮಾಗಡಿ ತಾ, ರಾಮನಗರ ಜಿಲ್ಲೆ,–562127<br>9. ಶ್ರೀ ಸದ್ಗುರು ಮಹಾದೇವತಾತಾ ಸಂಸ್ಕೃತ ಪಾಠಶಾಲೆ, ಐಕ್ಯಸ್ಥಳ ಸಂಗಮ ಕ್ಷೇತ್ರ, ಹುಲ್ಲಹಳ್ಳಿ ಹೋಬಳಿ, ಕಣೇನೂರು ಅಂಚೆ, ನಂಜನಗೂಡು ತಾ, ಮೈಸೂರು ಜಿಲ್ಲೆ,–571314<br>10. ಶ್ರೀ ಎಸ್ ಎಸ್ ಎಚ್ ಸಂಸ್ಕೃತ ಪಾಠಶಾಲೆ, ಚಡಚಣ ತಾ, ವಿಜಯಪುರ –ಜಿಲ್ಲೆ 586205<br>11. ವಾಸವಿ ಎಜುಕೇಷನಲ್ ಟ್ರಸ್ಟ್ ಸಂಸ್ಕೃತ ವಿದ್ಯಾಲಯ, ನಂ: 18, 14 ನೇ ಮುಖ್ಯ ರಸ್ತೆ, 2 ನೇ ಹಂತ, ಜೆ.ಪಿ.ನಗರ. ಬೆಂಗಳೂರು–560078<br>12. ಶ್ರೀ ಗುರು ಸೋಮೇಶ್ವರ ಕೃಪಾ ಪೋಷಿತ ಶ್ರೀ ಶಿವಯೋಗೀಶ್ವರ ವೇದ ಸಂಸ್ಕೃತ ಪಾಠಶಾಲೆ, ಸನ್ನತಿ, ಚಿತ್ತಾಪುರ ತಾ॥ ಕಲಬುರ್ಗಿ ಜಿಲ್ಲೆ.<br>13. ಶ್ರೀ ಸದ್ಗುರು ಮಹಾದೇವತಾತಾ ಸಂಸ್ಕೃತ ಪಾಠಶಾಲೆ, ಐಕ್ಯಸ್ಥಳ ಸಂಗಮಕ್ಷೇತ್ರ, ಹುಲ್ಲಹಳ್ಳಿ ಹೋಬಳಿ, ಕಣೆನೂರು ಪೋಸ್ಟ್, ನಂಜನಗೂಡು ತಾ॥ ಮೈಸೂರು –ಜಿಲ್ಲೆ–571314.<br>14. ಓಂ ಶಿವ–ಶಕ್ತಿ ಸಂಸ್ಕೃತ ಪಾಠಶಾಲೆ, ಹುಲ್ಲೂರ, ತಾ॥ ಮುದ್ದೇಬಿಹಾಳ. ವಿಜಯಪುರ ಜಿಲ್ಲೆ<br>15. ಶ್ರೀ ಕರಿಸಿದ್ದೇಶ್ವರಸ್ವಾಮಿ ಸಂಸ್ಕೃತ ಜೋತಿಷ್ಯ ವೇದಾಗಮ ಪಾಠಶಾಲೆ, (ಚೆನ್ನವೀರಸ್ವಾಮಿ ವಿರಕ್ತಮಠ) ಅರಕೆರೆ–ಪೋಸ್ಟ್, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ.<br>16. ಶ್ರೀ ಸುಜ್ಞಾನಪಥ ಸಂಸ್ಕೃತ ಪಾಠಶಾಲೆ, ಮಟಮಾರಿ,ರಾಯಚೂರು ತಾ & ಜಿಲ್ಲೆ.<br>17. ಶ್ರೀ ಸರಸ್ವತಿ ಸಂಸ್ಕೃತ ಪಾಠಶಾಲೆ, ನಾದ ಬಿ.ಕೆ, ಇಂಡಿ ತಾ॥ ವಿಜಯಪುರ ಜಿಲ್ಲೆ.<br>18. ಶ್ರೀ ಭೀರೇಶ್ವರ ಸಂಸ್ಕೃತ ಪಾಠಶಾಲೆ, ಶಿರಾಡೋಣ, ಚಡಚಣ– ತಾ॥, ವಿಜಯಪುರ ಜಿಲ್ಲೆ–586205<br>19. ಆಕಳವಾಡಿ ಟ್ರಸ್ಟ್, ಸಂಸ್ಕೃತ ವಿದ್ಯಾಸಂಸ್ಥೆ, ಲಕ್ಷ್ಮೀ ಕಾಂಪ್ಲೆಕ್ಸ್, ನೀಲಿಜನ ರಸ್ತೆ, ಹುಬ್ಬಳ್ಳಿ–580023 |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 05** | **ಸಂಸ್ಕೃತ ಪಾಠಶಾಲೆಗಳಿಗೆ ನಿಗಧಿತ ಅವಧಿಯೊಳಗೆ ಮಾನ್ಯತೆ ನವೀಕರಿಸುವ ಕುರಿತು.** |
| ಟಿಪ್ಪಣಿ | ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೇದ ಮತ್ತು ಸಂಸ್ಕೃತ ಪಾಠಶಾಲೆಗಳಿಗೆ ಅಕ್ಟೋಬರ್ ಮಾಹೆಯಿಂದ ಡಿಸೆಂಬರ್ ಮಾಹೆಯೊಳಗೆ ಮಾನ್ಯತೆ ನವೀಕರಿಸಲು ಸೂಕ್ತ ನಿರ್ಣಯಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 06** | **ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನವೀಕರಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ.** |

| | |
|---|---|
| ಟಿಪ್ಪಣಿ | 1. ಯೋಗ ವೆಲ್‌ನೇಸ್ ಆಧ್ಯಯನ ಮತ್ತು ಸಂಶೋಧನಾ ಕೇಂದ್ರ, ನಂ-2ಸಿ,1-112.2ನೇ ಕ್ರಾಸ್ ರಸ್ತೆ, ಈಸ್ಟ್ ಎನ್.ಜಿ.ಇ.ಎಫ್ ಲೇಔಟ್, ಕಸ್ತೂರಿ ನಗರ, ಬೆಂಗಳೂರು- 560043,<br>2. ವಿಶ್ವಮಾನವ ಯೋಗ ಆಧ್ಯಯನ ಮತ್ತು ಸಂಶೋಧನಾ ಕೇಂದ್ರ, ವಿಶ್ವಮಾನವ ವಿದ್ಯಾನಿಕೇತನ ಸಂಸ್ಥೆ, ಇ ಮತ್ತು ಎಫ್ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು- 570018.<br>3. ಶ್ರೀ ಪ್ರಕಾಶ್ ಯೋಗಿ ಇಂಟರ್ ನ್ಯಾಷನಲ್ ಯೋಗ ಆಧ್ಯಯನ ಮತ್ತು ಸಂಶೋಧನಾ ಕೇಂದ್ರ, ನಂ-538, 4ನೇ ಕ್ರಾಸ್, 8ನೇ ಮುಖ್ಯ ರಸ್ತೆ, ಹಂಪಿನಗರ, ವಿಜಯ ನಗರ, 2ನೇ ಹಂತ ಬೆಂಗಳೂರು-560104.<br>ಮೇಲಿನ 03 ಸಂಸ್ಥೆಗಳಲ್ಲಿ ನಡೆಯುತ್ತಿರುವ ಯೋಗ ಸರ್ಟಿಫಿಕೇಟ್, ಯೋಗ ಡಿಪ್ಲೋಮಾ ಹಾಗೂ ಯೋಗ ಪಿ.ಜಿ ಡಿಪ್ಲೋಮೋ ತರಗತಿಗಳಿಗೆ 2024-25ನೇ ಸಾಲಿನಿಂದ 2026-27ನೇ ಸಾಲಿನ ವರೆಗೆ 03 ವರ್ಷಗಳ ಅವಧಿಗೆ ಮಾನ್ಯತೆ ನವೀಕರಣ ಮಾಡಿದ್ದು ಘಟನೋತ್ತರ ಅನುಮೋದನೆಗೆ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 07** | **ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡುವ ಬಗೆಗೆ.** |
| ಟಿಪ್ಪಣಿ | 2025-26 ನೇ ಸಾಲಿನಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಈ ಕೆಳಕಂಡ ಸಂಸ್ಥೆಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>1. ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್ # ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು -18<br>2. ವಿಶ್ವಮಧ್ವಮಹಾಪರಿಷತ್, #5, ಪಂಪಮಹಾಕವಿರಸ್ತೆ, ಬಸವನಗುಡಿ, ಬೆಂಗಳೂರು -560004<br>3. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಸಂಶೋಧನಾ ಕೇಂದ್ರ, ಶ್ರೀ ಕುಂಚಿಟಿಗರ ಮಹಾಸಂಸ್ಥಾನ ಮಠ ಶ್ರೀ ನರಸಿಂಹಗಿರಿ ಸುಕ್ಷೇತ್ರ, ಎಲೆರಾಂಪುರ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ<br>4. ಎಮ್.ಇ.ಎಸ್. ಪ್ರೊ.ಎಮ್.ಪಿ.ಎಲ್ ಶಾಸ್ತ್ರಿ ಸೆಂಟರ್ ಫಾರ್ ವೇದಿಕ್ ಸ್ಟಡೀಸ್, ವಿದ್ಯಾಸಾಗರ ಪ್ರೊ.ಎಮ್.ಪಿ.ಎಲ್. ಶಾಸ್ತ್ರಿ ರಸ್ತೆ, 15ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು- 560003<br>ಮೇಲ್ಕಂಡ ಸಂಶೋಧನಾ ಕೇಂದ್ರಗಳಿಗೆ ನಿಯಮಾನುಸಾರ ಪಂಚ ಸದಸ್ಯ ಸಮಿತಿಯು ಭೇಟಿ ನೀಡಿ ಸಂಶೋಧನಾ ಕೇಂದ್ರಗಳ ಮಾನ್ಯತೆಯನ್ನು ನೀಡಬಹುದು ಎಂದು ವರದಿಯನ್ನು ಸಲ್ಲಿಸಿರುತ್ತವೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 08** | **ಭೈಷಜ್ಯ ಜ್ಯೋತಿಷ್ಯ ಅಲ್ಪಾವಧಿ ಕೋರ್ಸನ್ನು 2026-27ನೇ ಶೈಕ್ಷಣಿಕ ವರ್ಷದಿಂದ ಆರಂಭಿಸಲು ಅನುಮೋದನೆ ನೀಡುವ ಕುರಿತು.** |
| ಟಿಪ್ಪಣಿ | ಭೈಷಜ್ಯ ಜ್ಯೋತಿಷ ಅಲ್ಪಾವಧಿ ಕೋರ್ಸನ್ನು ಆರಂಭಿಸಲು ಕರ್ನಾಟಕ ರಾಜ್ಯ ಜ್ಯೋತಿಷಿಗಳ ಮತ್ತು ಜ್ಯೋತಿಷ್ಯ ಬೋಧಕ ಸಂಸ್ಥೆಗಳ ಒಕ್ಕೂಟದವರು ಮನವಿಯನ್ನು ಸಲ್ಲಿಸಿರುತ್ತಾರೆ. ಮತ್ತು ಪಾಠ್ಯಕ್ರಮವನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ಅಲ್ಪಾವಧಿ ಕೋರ್ಸನ್ನು ಪ್ರಶಿಕ್ಷಣ ಪರಿಷತ್ತಿನ ಹಾಗೂ ಪ್ರಶಾಸನ ಸಭೆಯ ಅನುಮೋದನೆಯೊಂದಿಗೆ ಆರಂಭಿಸಬಹುದು ಎಂದು ಅಧ್ಯಯನ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಯಿತು. 2026-27ನೇ ಶೈಕ್ಷಣಿಕ ವರ್ಷದಿಂದ ಭೈಷಜ್ಯ ಜ್ಯೋತಿಷ್ಯ ಅಲ್ಪಾವಧಿ ಕೋರ್ಸನ್ನು ಆರಂಭಿಸಲು ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಪಾಠ್ಯಕ್ರಮದಲ್ಲಿ ಆಧಾರಗ್ರಂಥಗಳನ್ನು ಸೂಚಿಸಲು ತಿಳಿಸಿ, ಪುನಃ ಪ್ರಸ್ತಾವನೆ ಸಲ್ಲಿಸಲು ಸಂಬಂಧಿಸಿದ ಸಂಸ್ಥೆಯವರಿಗೆ ಸೂಚಿಸುವುದು. ವೈದ್ಯರಿಗೆ ಸೀಮಿತಗೊಳಿಸಿದಲ್ಲಿ ಉತ್ತಮ ಎಂಬ ಅಭಿಪ್ರಾಯವನ್ನು ಸಭೆಯು ವ್ಯಕ್ತಪಡಿಸಿತು.** |

| | |
|---|---|
| **ವಿಷಯ 09** | **ಸಿ.ಎಮ್.ಆರ್. ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನಿತ ಜ್ಯೋತಿಷ ಅಧ್ಯಯನ ಕೇಂದ್ರಗಳು ಜ್ಯೋತಿಷ ಕೋರ್ಸ್‌ಗಳನ್ನು 2026–27ನೇ ಶೈಕ್ಷಣಿಕ ವರ್ಷದಿಂದ ಆರಂಭಿಸಲು ಅನುಮೋದನೆ ನೀಡುವ ಕುರಿತು.** |
| ಟಿಪ್ಪಣಿ | **ಕರ್ನಾಟಕ** ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುತ್ತಿರುವ ಜ್ಯೋತಿಷ **ಸರ್ಟಿಫಿಕೇಟ್** ಡಿಪ್ಲೋಮಾ ಅಡ್ವಾನ್ಸ ಡಿಪ್ಲೋಮಾ / ವಾಸ್ತು **ಸರ್ಟಿಫಿಕೇಟ್** ಡಿಪ್ಲೋಮಾ ಅಡ್ವಾನ್ಸ ಡಿಪ್ಲೋಮಾ / ಜ್ಯೋತಿಷ ಅಲ್ಪಾವಧಿ **ಕೋರ್ಸ್**ಗಳನ್ನು **ಕರ್ನಾಟಕ** ಸಂಸ್ಕೃತ ವಿಶ್ವವಿದ್ಯಾಲಯದೊಂದಿಗೆ ಎಮ್.ಒ.ಯು. ಮಾಡಿಕೊಂಡಿರುವ ಸಿ.ಎಮ್.ಆರ್. ವಿಶ್ವವಿದ್ಯಾಲದಲ್ಲಿ ಆರಂಭಿಸಲು **ಕರ್ನಾಟಕ** ಸಂಸ್ಕೃತ ವಿಶ್ವವಿದ್ಯಾಲಯದ ಮಾನಿತ ಜ್ಯೋತಿಷ ಅಧ್ಯಯನ ಕೇಂದ್ರಗಳು 2026–27ನೇ ಶೈಕ್ಷಣಿಕ **ವರ್ಷ**ದಿಂದ ಆರಂಭಿಸಲು ಉತ್ಸುಕವಾಗಿವೆ. ಈ ಸಂಬಂಧ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | ಸಿ.ಎಮ್.ಆರ್. ವಿಶ್ವವಿದ್ಯಾಲಯ ಮತ್ತು **ಮಾನಿತ ಜ್ಯೋತಿಷ ಅಧ್ಯಯನ ಕೇಂದ್ರಗಳು** ಪರಸ್ಪರ ಸಹಮತಿಯೊಂದಿಗೆ ಕೋರ್ಸ್‌ಗಳನ್ನು **ಆರಂಭಿಸಲು ವಿಶ್ವವಿದ್ಯಾಲಯದ ಅಭ್ಯಂತರವಿರುವುದಿಲ್ಲ ಎಂದು ಸಭೆಯು ನಿರ್ಣಯಿಸಿತು.** |
| **ವಿಷಯ 10** | **ಬ್ರಹ್ಮವಿದ್ಯಾಟ್ರಸ್ಟ್ , #12, 9ನೇ ಮುಖ್ಯರಸ್ತೆ, ಜಯನಗರ, ಮೈಸೂರು – ಈ ಸಂಶೋಧನಾ ಕೇಂದ್ರದವರು ವಿವಿಧ ಅಲ್ಪಾವಧಿ ಕೋರ್ಸ್‌ಗಳನ್ನು 2026–27ನೇ ಶೈಕ್ಷಣಿಕ ವರ್ಷದಿಂದ ಆರಂಭಿಸುವ ಕುರಿತು.** |
| ಟಿಪ್ಪಣಿ | ಬ್ರಹ್ಮವಿದ್ಯಾಟ್ರಸ್ಟ್ , #12, 9ನೇ ಮುಖ್ಯರಸ್ತೆ, ಜಯನಗರ, ಮೈಸೂರು– ಈ ಸಂಶೋಧನಾ ಕೇಂದ್ರದವರು ಈ ಕೆಳಕಂಡ ಅಲ್ಪಾವಧಿ ಕೋರ್ಸ್‌ಗಳನ್ನು ಆರಂಭಿಸಲು ಪಾಠ್ಯಕ್ರಮವನ್ನು ಸಿದ್ಧಪಡಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>1. **Samskrta Sangitam (Samkrta Encoding Sangita – 4 courses)**<br>2. **Samskrta Natyam (Study of Natya Shastra – 4 courses)**<br>3. **Ayurvedeeya Jeevana Paddati**<br>4. **Ayurvedeeya Ahara Paddati**<br>5. **Ayurvedeeya Swasthya Prajna**<br>6. **Yogasanas – Art & Science**<br>7. **Pranayama & Dhyana**<br>8. **Patanjali Yoga Shastra Parichaya**<br>2026–27ನೇ ಶೈಕ್ಷಣಿಕ **ವರ್ಷದಿಂದ** ಸದರಿ ಕೋರ್ಸ್‌ಗಳನ್ನು ಆರಂಭಿಸಲು ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಈ ಬಗ್ಗೆ ಚರ್ಚಿಸಲಾಯಿತು. ಆಯುರ್ವೇದ ಕೋರ್ಸ್ಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮವನ್ನು ಪರಿಶೀಲಿಸಿ ವರದಿ ಸಲ್ಲಿಸಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸಲಾಯಿತು.**<br>1. **ಡಾ.** ಅಹಲ್ಯಾ ಎಸ್, ಕುಲಪತಿಗಳು, ಕಸಂವಿ. – ಅಧ್ಯಕ್ಷರು<br>2. ಡಾ.ಆನಂದ ಕಟ್ಟಿ – ಆಯುರ್ವೇದ ಆಸ್ಪತ್ರೆ. – ಸದಸ್ಯರು<br>3. ಡಾ. ಸಜಿತಾ – ಆಯುರ್ವೇದ ಆಸ್ಪತ್ರೆ. – ಸದಸ್ಯರು<br>4. ಡಾ. ಶ್ರೀ ಹರ್ಷ – ಆಯುರ್ವೇದ ಆಸ್ಪತ್ರೆ. – ಸದಸ್ಯರು<br>5. ಡಾ. ಸಾವಿತ್ರಿ – ಆಯುರ್ವೇದ ಅಕಾಡೆಮಿ – ಸದಸ್ಯರು<br>6. ಡಾ. ಶ್ರೀಲಲಿತಾ ಯೋಗ ವಿಭಾಗ, ಕಸಂವಿ – ಸದಸ್ಯ ಕಾರ್ಯದರ್ಶಿ<br>**ಮುಂದಿನ ಸಭೆಯಲ್ಲಿ ಮಂಡಿಸಿ, ನಿರ್ಧರಿಸಲು ಸಭೆಯು ಸೂಚಿಸಿತು. ಹಾಗೂ** ಈ ಕೆಳಕಂಡ 05 ಕೋರ್ಸ್‌ಗಳನ್ನು ಆರಂಭಿಸಲು ಅನುಮತಿಸಲಾಯಿತು. |

| | |
|---|---|
| | 1. Samskrta Sangitam (Samkrta Encoding Sangita – 4 courses)<br>2. Samskrta Natyam (Study of Natya Shastra – 4 courses)<br>3. Yogasanas – Art & Science<br>4. Pranayama & Dhyana<br>5. Patanjali Yoga Shastra Parichaya |
| **ವಿಷಯ 11** | **ಬ್ರಹ್ಮವಿದ್ಯಾಟ್ರಸ್ಟ್, #12, 9ನೇ ಮುಖ್ಯರಸ್ತೆ, ಜಯನಗರ, ಮೈಸೂರು – ಈ ಸಂಶೋಧನಾ ಕೇಂದ್ರದವರು ಆರಂಭಿಸಲು ಉದ್ದೇಶಿಸಿರುವ ವಿವಿಧ ಕೋರ್ಸ್‌ಗಳಿಗೆ ವಿದೇಶಿ ವಿದ್ಯಾಥಿಗಳನ್ನು ನೋಂದಣಿ ಮಾಡಿಕೊಳ್ಳಲು ಅನುಮೋದನೆ ನೀಡುವ ಕುರಿತು.** |
| ಟಿಪ್ಪಣಿ | 2026–27ನೇ ಶೈಕ್ಷಣಿಕ ವರ್ಷದಿಂದ ಬ್ರಹ್ಮವಿದ್ಯಾಟ್ರಸ್ಟ್,#12,. 9ನೇ ಮುಖ್ಯರಸ್ತೆ, ಜಯನಗರ, ಮೈಸೂರು– ಈ ಸಂಶೋಧನಾ ಕೇಂದ್ರದವರು ಆರಂಭಿಸಲು ಉದ್ದೇಶಿಸಿರುವ ವಿವಿಧ ಕೋರ್ಸ್‌ಗಳಿಗೆ ವಿದೇಶಿ ವಿದ್ಯಾರ್ಥಿಗಳನ್ನು ನೋಂದಣಿ ಮಾಡಿಕೊಳ್ಳಲು ಅನುಮೋದನೆ ನೀಡುವಂತೆ ಕೋರಿರುವುದರಿಂದ ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ವಿದೇಶಿ ವಿದ್ಯಾರ್ಥಿಗಳು ದಾಖಲಾತಿ ಪಡೆದು ವಿದ್ಯಾರ್ಥಿ ವೀಸಾದೊಂದಿಗೆ ಭೌತಿಕವಾಗಿ ಹಾಜರಿದ್ದು ಅಧ್ಯಯನ ಮಾಡುವ ಷರತ್ತಿನೊಂದಿಗೆ ಅನುಮತಿಸಿದೆ. Online ನಲ್ಲಿ ಸಾಧ್ಯವಿಲ್ಲವೆಂದು ತೀರ್ಮಾನಿಸಲಾಯಿತು.** |
| **ವಿಷಯ 12** | **NEP 2023 ಮತ್ತು SEP 2024ರ ಪಾಠ್ಯಕ್ರಮವನ್ನು ಅನುಮೋದಿಸುವ ಕುರಿತು.** |
| ಟಿಪ್ಪಣಿ | **NEP 2023 ಮತ್ತು SEP 2024ರ ಪ್ರಕಾರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಾಠ್ಯಕ್ರಮಕ್ಕೆ ಒಪ್ಪಿಗೆ ಪಡೆಯಲು ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.** |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 13** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Evening College Statute governing Under-Graduate, Post-Graduate, Diploma, P.G Diploma and other certificate Programs in Karnataka Samskrit University ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Evening College Statute governing Under-Graduate, Post-Graduate, Diploma, P.G Diploma and other certificate Programs in Karnataka Samskrit University ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 14** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Regulations Governing Diploma Programmes in Karnataka Samskrit University ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Regulations Governing Diploma Programmes in Karnataka Samskrit University ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |

| | |
|---|---|
| ವಿಷಯ 15 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Statutes Governing the Affiliation Of Colleges/ Institution Under the Jurisdiction of Karnataka Samskrita University Vishwavidyalaya ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Statutes Governing The Affiliation Of Colleges/ Institution Under The Jurisdiction Of Karnataka Samskrita University Vishwavidyalaya ಪರಿನಿಯಮವನ್ನು ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 16 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Regulations Governing Post-Graduate Programmes In Karnataka Samskrita Vishwavidyalaya ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Regulations Governing Post-Graduate Programmes In Karnataka Samskrita Vishwavidyalaya ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 17 | **Statutes Relating to Establishment of The College Development Council in Karnataka Samskrita Vishwavidyalaya ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Statutes Relating to Establishment of The College Development Council in Karnataka Samskrita Vishwavidyalaya ಪರಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 18 | **ಪರಿನಿಯಮಾವಲಿಯಲ್ಲಿ ಸೂಚಿಸಿದ ಸಮಯ ಮೀರಿದ ನಂತರ ಸಮರ್ಪಣೆಗೆ ಅವಕಾಶ ಕೋರಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿ ನಿರ್ಣಯಿಸುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Statutes related to recognition governing the Degree of Doctor of Philosophy (PhD) Vidyavaridhi in the Karnataka Samskrit University ಪರಿನಿಯಮಾವಳಿಯ **27.5** ರಂತೆ ಅಂತಿಮ **RAC** ಯಲ್ಲಿ ಅನುಮತಿ ದೊರೆತ ನಂತರ ಆರು ತಿಂಗಳ ಒಳಗಾಗಿ ಶೋಧಪ್ರಬಂಧವನ್ನು ಸಮರ್ಪಣೆ ಮಾಡಬೇಕಿದೆ. ಆದರೆ ಕೆಲವು ವಿದ್ಯಾರ್ಥಿಗಳು **06** ತಿಂಗಳು ಪೂರ್ಣಗೊಂಡ ನಂತರ ಶೋಧ ಪ್ರಬಂಧ ಸಮರ್ಪಣೆಗೆ ಅವಕಾಶ ಕೋರುತ್ತಿದ್ದಾರೆ. ಪರಿನಿಯಮಾವಲಿಯಲ್ಲಿ ಸೂಚಿಸಿದ ಸಮಯ ಮೀರಿದ ನಂತರ ಸಮರ್ಪಣೆಗೆ ಅವಕಾಶ ಕೋರಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿ ನಿರ್ಣಯಿಸಲು ಸಭೆಯ ಮುಂದಿರಿಸಿದೆ. |
| ನಿರ್ಣಯ | **RAC ಯಲ್ಲಿ ಅನುಮತಿ ದೊರೆತ** 06 **ತಿಂಗಳು ಪೂರ್ಣಗೊಂಡ ನಂತರ ಶೋಧ ಪ್ರಬಂಧ ಸಮರ್ಪಣೆಗೆ ರೂ 10,000/– ದಂಡ ಶುಲ್ಕವನ್ನು ವಿಧಿಸಿ ಅವಕಾಶ ನೀಡಲು ಸಭೆಯು ತೀರ್ಮಾನಿಸಿತು.** |
| ವಿಷಯ 19 | **ಶೋಧ ಪ್ರಬಂಧವು ಹೊಂದಿರಬೇಕಾದ ಕನಿಷ್ಠ ಪುಟಗಳ ಮಿತಿಯ ಕುರಿತು ಚರ್ಚಿಸಿ ನಿರ್ಣಯಿಸುವ ಕುರಿತು.** |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Statutes related to recognition governing the Degree of Doctor of Philosophy (PhD) Vidyavaridhi in the Karnataka Samskrit University ಪರಿನಿಯಮಾವಳಿಯ ಸಂಖ್ಯೆ 28 ರಲ್ಲಿ Guidelines for Preparing Thesis ನಲ್ಲಿ ಶೋಧಪ್ರಬಂಧ ಹೊಂದಿರಬೇಕಾದ ಪುಟಗಳ ಕುರಿತು ನಿರ್ದೇಶನವಿರುವುದಿಲ್ಲ. ಆದ್ದರಿಂದ ಶೋಧ ಪ್ರಬಂಧವು ಹೊಂದಿರಬೇಕಾದ ಕನಿಷ್ಠ ಪುಟಗಳ ಮಿತಿಯ ಕುರಿತು ಚರ್ಚಿಸಿ ನಿರ್ಣಯಿಸಲು ಸಭೆಯ ಮುಂದಿರಿಸಿದೆ. |
| ನಿರ್ಣಯ | **ಕನಿಷ್ಠ 250 ಪುಟಗಳಿಗೆ ನಿಗದಿಪಡಿಸಿ ನಿರ್ಣಯಿಸಲಾಯಿತು.** |
| ವಿಷಯ 20 | **ಶೋಧ ಪ್ರಬಂಧದ ಮೌಲ್ಯಮಾಪನಕ್ಕೆ ಶಾಸ್ತ್ರೀಯ ವಿಚಾರಗಳಲ್ಲಿ ಪರಿನಿಯಮಾವಳಿಯಲ್ಲಿ ನಿರ್ದೇಶಿಸಿರುವ ನಿಯಮದೊಳಗಿರುವ 5 ಜನ ತಜ್ಞರ ಹೆಸರು ಲಭ್ಯವಾಗದಿದ್ದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮದ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ Statutes related to recognition governing the Degree of Doctor of Philosophy (PhD) Vidyavaridhi in the Karnataka Samskrit University ಪರಿನಿಯಮಾವಳಿಯ ಸಂಖ್ಯೆ 30.03 ಯಂತೆ ಶೋಧ ಪ್ರಬಂಧದ ಮೌಲ್ಯಮಾಪನಕ್ಕೆ ಕರ್ನಾಟಕ ರಾಜ್ಯದೊಳಗಿನ 5 ಜನ ತಜ್ಞರ ಹಾಗೂ ಹೊರ ರಾಜ್ಯದ 5 ಜನ ತಜ್ಞರ ಹೆಸರನ್ನು ಕುಲಸಚಿವರು (ಮೌಲ್ಯಮಾಪನ) ಇವರಿಗೆ ಕಳುಹಿಸಿಕೊಡುವಂತೆ ನಿರ್ದೇಶನವಿದೆ. ಆದರೆ ಕೆಲವು ಶಾಸ್ತ್ರೀಯ ವಿಚಾರಗಳಲ್ಲಿ ಪರಿನಿಯಮಾವಳಿಯಲ್ಲಿ ನಿರ್ದೇಶಿಸಿರುವ ನಿಯಮದೊಳಗಿರುವ 5 ಜನ ತಜ್ಞರ ಹೆಸರು ಲಭ್ಯವಾಗುತ್ತಿಲ್ಲ. ಇಂಥಹ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಕ್ರಮದ ಕುರಿತು ಚರ್ಚಿಸಿ ನಿರ್ಣಯಿಸಲು ಸಭೆಯ ಮುಂದಿರಿಸಿದೆ. |
| ನಿರ್ಣಯ | **ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸಿದವರನ್ನು ಹೊರತುಪಡಿಸಿ ಪ್ರಾಧ್ಯಾಪಕರ ವೃಂದದಲ್ಲಿ ನಿವೃತ್ತಿಗೊಂಡ 10 ವರ್ಷದವರೆಗೂ ವಿಷಯತಜ್ಞರಾಗಿ ಕರ್ತವ್ಯನಿರ್ವಹಿಸಲು ಅವಕಾಶ ನೀಡಲು ಸಭೆಯು ನಿರ್ಣಯಿಸಿತು.** |
| ವಿಷಯ 21 | **MES INSTITUTE OF MANAGEMENT ಈ ಸಂಸ್ಥೆಯ MES Prof. M.P.L. Sastry Centre for Vedic Studies ರವರು BOS Meeting ನಲ್ಲಿ ಸಿದ್ಧಪಡಿಸಿರುವ ಪಾಠ್ಯಕ್ರಮವನ್ನು ಅನುಮೋದಿಸುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿರುವ MES INSTITUTE OF MANAGEMENT ಈ ಸಂಸ್ಥೆಯ MES Prof. M.P.L. Sastry Centre for Vedic Studies ರವರು BOS Meeting ನಲ್ಲಿ ಪಾಠ್ಯಕ್ರಮವನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಈ ಪಾಠ್ಯಕ್ರವನ್ನು ಅನುಮೋದಿಸಲು ಸಭೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಆಯುರ್ವೇದ ವಿಷಯವಾಗಿ ಸಮಿತಿಯ ನಿರ್ಧಾರದ ನಂತರ ಇತರ ಕೋರ್ಸುಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲು ಅನುಮೋದಿಸಿದೆ.** |
| ವಿಷಯ 22 | **ನೂತನ ಕಾಲೇಜಿಗೆ ಅನುಮತಿ/ಸಂಯೋಜನೆಯನ್ನು ನೀಡುವ ಬಗ್ಗೆ.** |
| ಟಿಪ್ಪಣಿ | ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಕುಂಚಿಟಿಗರ ಮಹಾ ಸಂಸ್ಥಾನ ಮಠದ ಚಾರಿಟಬಲ್ ಟ್ರಸ್ಟ್(ರಿ.) ಎಲೆರಾಂಪುರ-572129. ಕೊರಟಗೆರೆ. ತುಮಕೂರು. ಶ್ರೀ ಈ ಸಂಸ್ಥೆಯು ಪದವಿ ಕೋರ್ಸನ್ನು ಪ್ರಾರಂಭಿಸಲು ಅನುಮತಿ ಕೋರಿದ್ದು, ಈ ಸಂಸ್ಥೆಗೆ LIC ಸಮಿತಿಯು ಭೇಟಿ ನೀಡಿ ವರದಿ ಸಲ್ಲಿಸಿರುತ್ತದೆ. **UUCMS** ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 23 | **ಶಾಸ್ತ್ರನಿಕಾಯದಡಿಯಲ್ಲಿ ಪೂರ್ವಮೀಮಾಂಸಾ ವಿಭಾಗವನ್ನು ತೆರೆಯುವ ಬಗ್ಗೆ.** |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ, 2009ರ ಅಧ್ಯಾಯ – VII, ನಿಕಾಯಗಳು, ಪ್ರಕರಣ 49 ರಂತೆ ವಿಶ್ವವಿದ್ಯಾಲಯಕ್ಕೆ ನಿಕಾಯಗಳ ಅಡಿಯಲ್ಲಿ ವಿವಿಧ ವಿಭಾಗಗಳು ಸೃಜನೆಯಾಗಿರುತ್ತವೆ. ಈಗಾಗಲೇ ಕೆಲವು ವಿಭಾಗಗಳನ್ನು ಪ್ರಾರಂಭಿಸಲಾಗಿದೆ. |

| ಕ್ರ. ಸಂ | ನಿಕಾಯಗಳು | ಸ್ನಾತಕೋತ್ತರ ವಿಭಾಗಗಳು |
|---|---|---|
| 1. | ಭಾಷಾ ನಿಕಾಯ | ಸಂಸ್ಕೃತ ಭಾಷಾ ಮತ್ತು ಸಾಹಿತ್ಯ |
| 2. | ಭಾಷಾ ನಿಕಾಯ | ಹಸ್ತಪ್ರತಿ ಶಾಸ್ತ್ರ |
| 3. | ಶಾಸ್ತ್ರ ನಿಕಾಯ | ಅಲಂಕಾರ ಶಾಸ್ತ್ರ |
| 4. | ಶಾಸ್ತ್ರ ನಿಕಾಯ | ವ್ಯಾಕರಣ ಶಾಸ್ತ್ರ |
| 5. | ಶಾಸ್ತ್ರ ನಿಕಾಯ | ಸಾಂಖ್ಯ ಮತ್ತು ಯೋಗ |
| 6. | ಶಾಸ್ತ್ರ ನಿಕಾಯ | ನ್ಯಾಯ ಮತ್ತು ವೈಶೇಷಿಕ |
| 7. | ವೇದಾಂತ ನಿಕಾಯ | ವೇದಾಂತ |
| 8. | ಭಾರತೀಯ ಪ್ರಾಚೀನ ವಿಜ್ಞಾನಗಳು | ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ |

ಮುಂದುವರೆದು, ಶಾಸ್ತ್ರನಿಕಾಯದಡಿಯಲ್ಲಿ ಪೂರ್ವಮೀಮಾಂಸಾ ವಿಭಾಗ ತೆರೆಯುವ ಅವಶ್ಯಕತೆ ಕಂಡುಬರುತ್ತದೆ. ಅಲ್ಲದೆ ಈ ವಿಭಾಗಕ್ಕೆ ಡಾ. ಮಂಜುನಾಥ ಭಟ್ಟ ಸಹಾಯಕ ಪ್ರಾಧ್ಯಾಪಕರನ್ನು ನೇಮಕಾತಿ ಮಾಡಲಾಗಿರುತ್ತದೆ. ಹಾಗಾಗಿ, ಪೂರ್ವ ಮೀಮಾಂಸಾ ವಿಭಾಗವನ್ನು 2026–27ನೇ ಸಾಲಿನಿಂದ ತೆರೆಯಲು ಸಭೆಯ ಅನುಮತಿಗಾಗಿ ಮಂಡಿಸಿದೆ.

| | |
|---|---|
| ನಿರ್ಣಯ | ಪೂರ್ವ ಮೀಮಾಂಸಾ ವಿಭಾಗವನ್ನು 2026–27ನೇ ಸಾಲಿನಿಂದ ತೆರೆಯಲು ಸಭೆಯು ಅನುಮತಿಸಿತು. ಹಾಗೂ ಡಾ. ಮಂಜುನಾಥ ಭಟ್ಟ ಸಹಾಯಕ ಪ್ರಾಧ್ಯಾಪಕರನ್ನು ಈ ವಿಭಾಗಕ್ಕೆ ಮರು ಸ್ಥಿರೀಕರಿಸಿ ಸ್ನಾತಕೋತ್ತರ, ಸರ್ಟಿಫಿಕೇಟ್ ಡಿಪ್ಲೋಮಾ ಮತ್ತು ಪಿ.ಜಿ. ಡಿಪ್ಲೋಮಾ ಕೋರ್ಸುಗಳನ್ನು ನಡೆಸಲು ನಿರ್ದೇಶಿಸಲಾಯಿತು. |
| ವಿಷಯ 24 | ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನವೀಕರಿಸುವ ಬಗೆಗೆ. |
| ಟಿಪ್ಪಣಿ | ಮಾನ್ಯತೆಯ ಅವಧಿಯು ಮುಗಿದಿರುವ ಈ ಕೆಳಕಂಡ ಸಂಶೋಧನಾ ಸಂಸ್ಥೆಗಳು ವಿಶ್ವವಿದ್ಯಾಲಯವು ಸೂಚಿಸಿರುವ ಅಡಕಗಳು ಮತ್ತು ಮಾನ್ಯತಾ ನವೀಕರಣ ಶುಲ್ಕದೊಂದಿಗೆ ಮಾನ್ಯತೆಯನ್ನು ನವೀಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. |

1. Shri Veda VijnanaShodhaSamsthana Magadi road, Channenahalli, Bengaluru – 562130
2. Vidyadheesha PG Samskrit Research Centre , Uttaradi Math Road,Basavangudi, Bangalore–560004
3. Dwaitavedanta Adhyayana and Samshodhana Kendra, Bull Temple Road, Bangalore–04.
4. Vyasatheertha samsodana Prathisthana, Krishnamurthypuram, Mysore
5. Sri Manmadhva siddanta research centre samskruta samshodhana kendra(SMSP), Udupi–576101

| | |
|---|---|
| | 6. Sri aitareya shodha prakashana peetha,sri bhagavatashrama pratishtana Sri Bhandarakeri, Matha,Udupi,1132,Kshemadhama, 8th cross ,1st G main road ,2nd stage Girinagara,Bengaluru-85,<br>7. Akila Karnataka Jyothirvijnana samshodhana center , Achavva Colony, Sai Nagar Hubli-580032<br>8. Sri Sri Veda Agama Research Institute. "Ved Vignan Maha Vidya Peeth" , The Art Of Living International Centre, 21st K.M. Kanakapura Road, Udayapura, Bangalore South – 560082.<br>9. Samskita Bharati, #Aksharam, 8th Main, Girinagar 2nd Stage, Bangaluru -560085<br>**ಮಾನ್ಯ ಕುಲಪತಿಗಳ ಒಪ್ಪಿಗೆಯ ಮೇರೆಗೆ ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈ ಸಂಶೋಧನಾ ಕೇಂದ್ರಗಳಿಗೆ 03 ವರ್ಷಗಳ ಅವಧಿಗೆ ಮಾನ್ಯತೆ ನವೀಕರಣ ಮಾಡಿದ್ದು ಘಟನೋತ್ತರ ಅನುಮೋದನೆಗೆ ಸಭೆಯ ಮುಂದೆ ಮಂಡಿಸಿದೆ.** |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 25** | **ಬಿ.ಎ./ಬಿ.ಎಸ್ಸಿ ಮತ್ತು ಎಮ್.ಎ. ಕೋರ್ಸುಗಳಿಗೆ ಸಂಬಂಧಿಸಿದ ವಿಷಯಗಳಿಗೆ ಅನುಮೋದನೆ ಪಡೆಯುವ ಕುರಿತು.** |
| **ಟಿಪ್ಪಣಿ** | ಬಿ.ಎ./ಬಿ.ಎಸ್ಸಿ ಮತ್ತು ಎಮ್.ಎ. ಕೋರ್ಸುಗಳಿಗೆ ಸಂಬಂಧಿಸಿದ ಈ ಕೆಳಕಂಡ ವಿಷಯಗಳಿಗೆ ಅನುಮೋದನೆ ಪಡೆಯಲು ಸಭೆಯ ಮುಂದೆ ಮಂಡಿಸಿದೆ.<br>1. ಹೊಸದಾಗಿ ಪ್ರಾರಂಭಿಸಿದ ಕಾಲೇಜುಗಳಿಗೆ ಕ್ರಮವಾಗಿ ಸ್ನಾತಕ ಪದವಿ(ಬಿ.ಎ./ಬಿ.ಎಸ್ಸಿ) ನಂತರವೇ ಸ್ನಾತಕೋತ್ತರ(ಎಂ.ಎ ಇತ್ಯಾದಿ) ತರಗತಿಗಳಿಗೆ ಪ್ರವೇಶಾತಿ ನೀಡುವುದು.<br>2. ಸಂಯೋಜಿತ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಎಮ್.ಎ. ಸ್ನಾತಕೋತ್ತರ (ಶಾಸ್ತ್ರ/ವೇದಾಂತ/ವೇದ) ತರಗತಿಗಳಿಗೆ ಪ್ರವೇಶ ಪಡೆಯಲು ತತ್ಸಂಬಂಧಿ ವಿಷಯದಲ್ಲಿ ಬಿ.ಎ. (ಶಾಸ್ತ್ರ /ವೇದಾಂತ/ವೇದ) ಸ್ನಾತಕ ಪದವಿ ಪಡೆದಿರುವುದು ಅನಿವಾರ್ಯವಾಗಿರುತ್ತದೆ.<br>3. ಸಂಸ್ಕೃತ ಭಾಷಾ-ಸಾಹಿತ್ಯ ವಿಭಾಗದ ಬಿ.ಎ. (Special B.A.) ಮತ್ತು ಎಂ.ಎ. ಕೋರ್ಸನ್ನು ಸಂಯೋಜಿತ ಕಾಲೇಜುಗಳಲ್ಲಿ ಪುನಃ ಪ್ರಾರಂಭಿಸುವುದು. |
| ನಿರ್ಣಯ | **1. ಹೊಸದಾಗಿ ಪ್ರಾರಂಭಿಸಿದ ಕಾಲೇಜುಗಳಿಗೆ ಕ್ರಮವಾಗಿ ಸ್ನಾತಕ ಪದವಿ(ಬಿ.ಎ./ಬಿ.ಎಸ್ಸಿ) ನಂತರವೇ ಸ್ನಾತಕೋತ್ತರ(ಎಂ.ಎ ಇತ್ಯಾದಿ) ತರಗತಿಗಳಿಗೆ ಪ್ರವೇಶಾತಿ ನೀಡುವುದು.- ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಒಂದೇ ವರ್ಷದಲ್ಲಿ ಆರಂಭಿಸಿದರೂ ಕೂಡ ಆ ಕೋರ್ಸ್ಗಳಿಗೆ ಪ್ರವೇಶಾತಿಗೆ ಅನುಮತಿಸಲು ನಿರ್ಣಯಿಸಲಾಯಿತು.**<br>**2. ಸಂಯೋಜಿತ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಎಂ.ಎ. ಸ್ನಾತಕೋತ್ತರ (ಶಾಸ್ತ್ರ/ವೇದಾಂತ/ವೇದ) ತರಗತಿಗಳಿಗೆ ಪ್ರವೇಶ ಪಡೆಯಲು ತತ್ಸಂಬಂಧಿ ವಿಷಯದಲ್ಲಿ ಬಿ.ಎ. (ಶಾಸ್ತ್ರ /ವೇದಾಂತ/ವೇದ) ಸ್ನಾತಕ ಪದವಿ ಪಡೆದಿರುವುದು ಅನಿವಾರ್ಯವಾಗಿರುತ್ತದೆ.- ಪ್ರಸ್ತುತ ಅಸ್ತಿತ್ವದಲ್ಲಿರುವ Bridge Course ಪದ್ಧತಿಯನ್ನು ಅನುಸರಿಸುವುದು.** |

| | |
|---|---|
| | 3. ಸಂಸ್ಕೃತ ಭಾಷಾ–ಸಾಹಿತ್ಯ ವಿಭಾಗದ ಬಿ.ಎ. (**Special B.A.**) ಮತ್ತು ಎಂ.ಎ. ಕೋರ್ಸ್‌ನ್ನು ಸಂಯೋಜಿತ ಕಾಲೇಜುಗಳಲ್ಲಿ ಪುನಃ ಪ್ರಾರಂಭಿಸುವುದು. – ಇದು ಉತ್ತಮ ವಿಷಯವಾಗಿದ್ದು ಪುನಃ ಪ್ರಾರಂಭಿಸಲು ಅನುಮತಿಸಲು ನಿರ್ಣಯಿಸಲಾಯಿತು. |
| **ವಿಷಯ 26** | **ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಸಹ ಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಅನುಮೋದನೆ ಪಡೆಯುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ಸಹ ಪ್ರಾಧ್ಯಾಪಕ 08 ಮತ್ತು ಸಹಾಯಕ ಪ್ರಾಧ್ಯಾಪಕ – 03 ಒಟ್ಟು 11 ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2025, ದಿನಾಂಕ: 03.09.2025ರ ಮೀಸಲಾತಿ ನಿಯಮಗಳಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಈ ಕೆಳಕಂಡ ಕೋಷ್ಟಕವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |

| ಕ್ರ.ಸಂ. | ನಿಕಾಯಗಳು | ಸ್ನಾತಕೋತ್ತರ ವಿಭಾಗಗಳು | ಸಹಾಯಕ ಪ್ರಾಧ್ಯಾಪಕರು (ಅಧಿಸೂಚಿಸ ಬೇಕಾಗಿರುವುದು) | ಮೀಸಲಾತಿ ಬಿಂದುಗಳು | ಸಹ ಪ್ರಾಧ್ಯಾಪಕರು (ಅಧಿಸೂಚಿಸ ಬೇಕಾಗಿರುವುದು) | ಮೀಸಲಾತಿ ಬಿಂದುಗಳು (**Pooling**) |
|---|---|---|---|---|---|---|
| 1 | ಭಾಷಾ ನಿಕಾಯ | ಸಂಸ್ಕೃತ ಭಾಷಾ ಮತ್ತು ಸಾಹಿತ್ಯ | – | – | 1 | **SC–A–1** |
| 2 | ಭಾಷಾ ನಿಕಾಯ | ಹಸ್ತಪ್ರತಿ ಶಾಸ್ತ್ರ | – | – | 1 | |
| 3 | ಶಾಸ್ತ್ರ ನಿಕಾಯ | ವ್ಯಾಕರಣ ಶಾಸ್ತ್ರ | **02** | **SC–A, GM** | 1 | **GM–04** |
| 4 | ಶಾಸ್ತ್ರ ನಿಕಾಯ | ನ್ಯಾಯ ಮತ್ತು ವೈಶೇಷಿಕ | – | – | 1 | **ST–01** |
| 5 | ಶಾಸ್ತ್ರ ನಿಕಾಯ | ಸಾಂಖ್ಯ ಮತ್ತು ಯೋಗ | – | – | 1 | |
| 6 | ಶಾಸ್ತ್ರ ನಿಕಾಯ | ಪೂರ್ವ ಮೀಮಾಂಸಾ | – | – | 1 | **Cat–I–01** |
| 7 | ಶಾಸ್ತ್ರ ನಿಕಾಯ | ಅಲಂಕಾರ ಶಾಸ್ತ್ರ | – | – | 1 | |
| 8 | ವೇದಾಂತ ನಿಕಾಯ | ವೇದಾಂತ | – | – | 1 | **Cat–IIA–1** |
| 9 | ಭಾರತೀಯ ಪ್ರಾಚೀನ ವಿಜ್ಞಾನಗಳು | ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ | **01** | **ST** | – | |
| | ಒಟ್ಟು | | **03** | | **08** | |

| | |
|---|---|
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಬೋಧಕರ ಕೊರತೆಯಿದ್ದು, ಶೈಕ್ಷಣಿಕ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಈಗಾಗಲೇ ಸರ್ಕಾರದಿಂದ ಮಂಜೂರಾಗಿ ಖಾಲಿ ಇರುವ ಹುದ್ದೆಗಳಲ್ಲಿ ಮೇಲ್ಕಂಡ 11 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 27** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಯುಜಿಸಿ ವೇತನ ಶ್ರೇಣಿಯ ಬೋಧಕ ಹುದ್ದೆಗಳನ್ನು ಶೈಕ್ಷಣಿಕ ವಿಭಾಗಾವಾರು ನಿಗಧಿಪಡಿಸುವ ಬಗೆಗೆ** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ವಿಧೇಯಕ 2009 (2010ರ ಕರ್ನಾಟಕ ಅಧಿನಿಯಮ ಸಂಖ್ಯೆ:13) ರಂತೆ ಸ್ಥಾಪಿತವಾಗಿದ್ದು ರಾಜ್ಯಾದ್ಯಂತ ವ್ಯಾಪ್ತಿಯನ್ನು ಹೊಂದಿರುತ್ತದೆ. ಈ ವಿಶ್ವವಿದ್ಯಾಲಯವು ಯುಜಿಸಿ 2(ಎಫ್) ಮತ್ತು 12(ಬಿ) ಮಾನ್ಯತೆಗಳನ್ನು ಹೊಂದಿರುವುದಲ್ಲದೆ, ನ್ಯಾಕ್ 'ಎ' ಶ್ರೇಣಿಯನ್ನು ಹೊಂದಿರುತ್ತದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ 3 ಸ್ನಾತಕ (ಬಿ.ಎ), 8 ಸ್ನಾತಕೋತ್ತರ (ಎಂ.ಎ & ಎಂ.ಎಸ್‌ಸಿ) ಕೋರ್ಸ್‌ಗಳು ನಡೆಯುತ್ತಿವೆ. ವಿಶ್ವವಿದ್ಯಾಲಯಕ್ಕೆ 133 ಹುದ್ದೆಗಳು |

| | |
|---|---|
| | ಸೃಜನೆಗೊಂಡಿರುತ್ತವೆ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳು ಅನುಮೋದನೆಗೊಂಡು ಅದರಂತೆ ಮತ್ತು ಸರ್ಕಾರದ ಕಾಲ ಕಾಲಿಕ ಆದೇಶಗಳು/ನಿಯಮಗಳನುಸಾರ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಯುಜಿಸಿ ವೇತನ ಶ್ರೇಣಿಯ ಬೋಧಕ ಹುದ್ದೆಗಳು ಈ ಕೆಳಕಂಡಂತೆ ಮಂಜೂರಾಗಿರುತ್ತವೆ.<br>ಪ್ರಾಧ್ಯಾಪಕರು – 10<br>ಸಹ ಪ್ರಾಧ್ಯಾಪಕರು – 15<br>ಸಹಾಯಕ ಪ್ರಾಧ್ಯಾಪಕರು – 20<br>ಒಟ್ಟು – 45 |

| ಕ್ರ.ಸಂ. | ನಿಕಾಯಗಳು | ಸ್ನಾತಕೋತ್ತರ ವಿಭಾಗಗಳು | ಸಹಾಯಕ ಪ್ರಾಧ್ಯಾಪಕರು | ಸಹ ಪ್ರಾಧ್ಯಾಪಕರು | ಪ್ರಾಧ್ಯಾಪಕರು |
|---|---|---|---|---|---|
| 1 | ಭಾಷಾ ನಿಕಾಯ | ಸಂಸ್ಕೃತ ಭಾಷಾ ಮತ್ತು ಸಾಹಿತ್ಯ | 3 | 2 | 1 |
| 2 | ಭಾಷಾ ನಿಕಾಯ | ಹಸ್ತಪ್ರತಿ ಶಾಸ್ತ್ರ | 3 | 2 | 1 |
| 3 | ಶಾಸ್ತ್ರ ನಿಕಾಯ | ವ್ಯಾಕರಣ ಶಾಸ್ತ್ರ | 3 | 2 | 1 |
| 4 | ಶಾಸ್ತ್ರ ನಿಕಾಯ | ನ್ಯಾಯ ಮತ್ತು ವೈಶೇಷಿಕ | 3 | 1 | 1 |
| 5 | ಶಾಸ್ತ್ರ ನಿಕಾಯ | ಸಾಂಖ್ಯ ಮತ್ತು ಯೋಗ | – | 2 | 1 |
| 6 | ಶಾಸ್ತ್ರ ನಿಕಾಯ | ಪೂರ್ವ ಮೀಮಾಂಸಾ | 1 | 1 | 1 |
| 7 | ಶಾಸ್ತ್ರ ನಿಕಾಯ | ಅಲಂಕಾರ ಶಾಸ್ತ್ರ | 3 | 1 | 1 |
| 8 | ವೇದಾಂತ ನಿಕಾಯ | ವೇದಾಂತ | 3 | 2 | 1 |
| 9 | ಭಾರತೀಯ ಪ್ರಾಚೀನ ವಿಜ್ಞಾನಗಳು | ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ | 1 | 2 | 2 |
| | ಒಟ್ಟು | | 20 | 15 | 10 |

| | |
|---|---|
| | ಮೇಲಿನ ಕೋಷ್ಟಕದಲ್ಲಿರುವಂತೆ 09 ವಿಭಾಗಗಳಿಗೆ ಮಂಜೂರಾಗಿರುವ ಬೋಧಕ ಹುದ್ದೆಗಳಲ್ಲಿ ಈವರೆಗೆ ನೇಮಕಾತಿಗೊಂಡಿರುವ ಮತ್ತು ಖಾಲಿ ಇರುವ ಹುದ್ದೆಗಳೂ ಸೇರಿದಂತೆ ಮೇಲಿನಂತೆ ನಿಗಧಿಪಡಿಸಿ ಅಧಿಸೂಚಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸರ್ಕಾರದಿಂದ ಮಂಜೂರಾದ ಹುದ್ದೆಗಳನ್ನು ಮೇಲ್ಕಂಡ ಕೋಷ್ಟಕದಲ್ಲಿರುವಂತೆ ವಿಭಾಗವಾರು ಸ್ಥಿರೀಕರಿಸಿ ಅಧಿಸೂಚನೆ ಹೊರಡಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು** |

**ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.**

ಪ್ರೊ. ವಿ. ಗಿರೀಶ್‌ಚಂದ್ರ
ಕುಲಸಚಿವರು(ಪ್ರ)
ಸದಸ್ಯ ಕಾರ್ಯದರ್ಶಿಗಳು

ಡಾ. ಅಹಲ್ಯಾ ಎಸ್.
ಕುಲಪತಿಗಳು
ಅಧ್ಯಕ್ಷರು